**ಶ್ರೀ ಪಾಲಾಕ್ಷ ಬಿನ್ ತಿಮ್ಮಯ್ಯ, ಮದ್ದಕನಹಳ್ಳಿ ಗ್ರಾಮ, ಶಿರಾ ತಾಲ್ಲೂಕು, ತುಮಕೂರು ಜಿಲ್ಲೆ ಇವರು ಸರ್ವೆ ನಂ. 21, ಚೇಲಗಾನಹಳ್ಳಿ ಗ್ರಾಮ, ಕೊರಟಗೆರೆ ತಾಲ್ಲೂಕು, ತುಮಕೂರು ಜಿಲ್ಲೆ ಇಲ್ಲಿ ಉದ್ದೇಶಿಸಿರುವ ಪ್ರಸ್ತಾವಿತ 'ಕಟ್ಟಡ ಕಲ್ಲು /ಎಂ–ಸ್ಯಾಂಡ್ ಗಣಿಗಾರಿಕೆ' ಸ್ಥಾಪಿಸುವ ಕುರಿತು ಪರಿಸರ ಸಾರ್ವಜನಿಕ ಸಭೆಯ ನಡವಳಿಗಳು:**

| | |
|---|---|
| ಪರಿಸರ ಸಾರ್ವಜನಿಕ ಸಭೆ ನಡೆದ ಸ್ಥಳ | ಯೋಜನಾ ಸ್ಥಳ, ಸರ್ವೆ ನಂ. 21 (ಭಾಗ), ಚೇಲಗಾನಹಳ್ಳಿ ಗ್ರಾಮ, ಕೊರಟಗೆರೆ ತಾಲ್ಲೂಕು, ತುಮಕೂರು ಜಿಲ್ಲೆ. |
| ಪರಿಸರ ಸಾರ್ವಜನಿಕ ಸಭೆ ನಡೆದ ದಿನಾಂಕ | 20.04.2022. |
| ಪರಿಸರ ಸಾರ್ವಜನಿಕ ಸಭೆಯ ಅಧ್ಯಕ್ಷತೆ | ಶ್ರೀ ಕೆ. ಚನ್ನಬಸಪ್ಪ, ಕ.ಆ.ಸೇ., (ಆಯ್ಕೆ ಶ್ರೇಣಿ),<br>ಅಪರ ಜಿಲ್ಲಾಧಿಕಾರಿಗಳು ಮತ್ತು ಅಧ್ಯಕ್ಷರು,<br>ಜಿಲ್ಲಾ ಪರಿಸರ ಸಾರ್ವಜನಿಕ ಸಭೆ ಸಮಿತಿ, ತುಮಕೂರು. |
| ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳ ವಿವರ | ಅನುಬಂಧ–1 ರಂತೆ ಲಗತ್ತಿಸಿದೆ |
| ಯೋಜನಾದಾರರ ವತಿಯಿಂದ ಸಭೆಯಲ್ಲಿ ಹಾಜರಿದ್ದ ಪ್ರತಿನಿಧಿಗಳ ವಿವರ | ಅನುಬಂಧ–2 ರಂತೆ ಲಗತ್ತಿಸಿದೆ |
| ಸಭೆಯಲ್ಲಿ ಭಾಗವಹಿಸಿದ್ದ ಸಾರ್ವಜನಿಕರ ವಿವರ | ಅನುಬಂಧ–3 ರಂತೆ ಲಗತ್ತಿಸಿದೆ |
| ಸಾರ್ವಜನಿಕರಿಂದ ಸ್ವೀಕೃತವಾದ ಅಹವಾಲುಗಳು | (ಅ) ಯೋಜನೆಯ ವಿರುದ್ಧ ಸ್ವೀಕೃತಗೊಂಡ ಅಹವಾಲುಗಳನ್ನು ಅನುಭಂದ–4 ರಂತೆ ಲಗತ್ತಿಸಿದೆ.<br>(ಆ) ಯೋಜನೆಯ ಪರವಾಗಿ ಸ್ವೀಕೃತಗೊಂಡ ಅಹವಾಲುಗಳನ್ನು ಅನುಭಂದ–5 ರಂತೆ ಲಗತ್ತಿಸಿದೆ. |
| ಯೋಜನಾದಾರರು ಸಭೆಯಲ್ಲಿ ಮಂಡಿಸಿದ ಪ್ರಸ್ತಾವಿತ ಯೋಜನೆಯ ಸಾರಾಂಶ | ಅನುಭಂದ–6 ರಂತೆ ಲಗತ್ತಿಸಿದೆ. |

ಪೀಠಿಕೆ:

ಶ್ರೀ ಪಾಲಾಕ್ಷ ಬಿನ್ ತಿಮ್ಮಯ್ಯ, ಮದ್ದಕನಹಳ್ಳಿ ಗ್ರಾಮ, ಶಿರಾ ತಾಲ್ಲೂಕು, ತುಮಕೂರು ಜಿಲ್ಲೆ ಇವರ ಪ್ರಸ್ತಾವಿತ 'ಕಟ್ಟಡ ಕಲ್ಲು /ಎಂ–ಸ್ಯಾಂಡ್ ಗಣಿಗಾರಿಕೆ' ಸ್ಥಾಪಿಸುವುದಕ್ಕೆ ಸಂಬಂದಪಟ್ಟಂತೆ, ಪರಿಸರ ಅರಣ್ಯ ಮತ್ತು ಹವಮಾನ ಬದಲಾವಣೆ ಸಚಿವಾಲಯ, ಭಾರತ ಸರ್ಕಾರ ಇವರು ದಿನಾಂಕ: 14.09.2006 ರಂದು ಹೊರಡಿಸಿರುವ 'ಪರಿಸರ ಅಘಾತ ಅಂದಾಜೀಕರಣ ಅಧಿಸೂಚನೆ' ಯಂತೆ ಪರಿಸರ ಸಾರ್ವಜನಿಕ ಸಭೆಯನ್ನು ನಡೆಸುವುದು ಕಡ್ಡಾಯವಾಗಿರುತ್ತದೆ. ಅದರಂತೆ, ಸದಸ್ಯ ಕಾರ್ಯದರ್ಶಿಗಳು, State Level Environment Impact Assessment Authority (SEIAA) – Karnataka ಇವರು ಸದರಿ ಯೋಜನೆಗೆ ದಿನಾಂಕ 12.07.2021 ರಂದು Terms of References (ಟಿ.ಒ.ಅರ್) ಅಂತಿಮಗೊಳಿಸಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯನ್ನು 'ಪರಿಸರ ಸಾರ್ವಜನಿಕ ಸಭೆ' ನಡೆಸಲು ಕೋರುವಂತೆ ಯೋಜನಾದಾರರಿಗೆ ತಿಳಿಸಿರುತ್ತಾರೆ. ಅದರಂತೆ ಈ ಯೋಜನೆಗೆ 'ಕರಡು ಪರಿಸರ' ಅಘಾತ ಅಂದಾಜೀಕರಣ ವರದಿಯನ್ನು ಕನ್ನಡ ಮತ್ತು ಇಂಗ್ಲೀಷ್ ಅವತರಣಿಕೆಯ ಸಂಕ್ಷಿಪ್ತ ವರದಿಯನ್ನು ಮಂಡಳಿಗೆ ಸಲ್ಲಿಸಿರುತ್ತಾರೆ ಹಾಗೂ ಕೇಂದ್ರ ಸರ್ಕಾರದ ಪರಿಸರ ಅಘಾತ ಅಧ್ಯಯನ ಅಧಿಸೂಚನೆ–2006ರ ಪ್ರಕಾರ ಪರಿಸರ ಸಾರ್ವಜನಿಕ ಸಭೆಯನ್ನು ನಡೆಸುವಂತೆ ಸಂಸ್ಥೆಯವರು ಮಂಡಳಿಯನ್ನು ಕೋರಿರುತ್ತಾರೆ. ಈ ಹಿನ್ನೆಲೆಯಲ್ಲಿ **'ಕಟ್ಟಡ ಕಲ್ಲು /ಎಂ–ಸ್ಯಾಂಡ್ ಗಣಿಗಾರಿಕೆ'** ಯೋಜನೆಗೆ ಸಂಬಂದಪಟ್ಟಂತೆ ಪರಿಸರ ಸಾರ್ವಜನಿಕ ಸಭೆಯನ್ನು ತುಮಕೂರು ಜಿಲ್ಲೆಯ ಕೊರಟಗೆರೆ ತಾಲ್ಲೂಕಿನ, ಚೇಲಗಾನಹಳ್ಳಿ ಗ್ರಾಮದ ಸರ್ವೆ ನಂ. 21 ರಲ್ಲಿ ಮಾನ್ಯ ಜಿಲ್ಲಾಧಿಕಾರಿಗಳು, ತುಮಕೂರು ಇವರ ನಿರ್ಣಯದಂತೆ ದಿನಾಂಕ 20.04.2022 ರಂದು ಬೆಳಗ್ಗೆ 11:00 ಘಂಟೆಗೆ ನಿಗದಿಪಡಿಸಲಾಗಿತ್ತು.

ಈ ನಿಟ್ಟಿನಲ್ಲಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು, ಪರಿಸರ ಸಾರ್ವಜನಿಕ ಸಭೆಯ ಪತ್ರಿಕಾ ಪ್ರಕಟಣೆಯನ್ನು ರಾಜ್ಯ ಮಟ್ಟದ ಇಂಗ್ಲೀಷ್ ದಿನ ಪತ್ರಿಕೆ "ಟೈಮ್ಸ್ ಆಫ್ ಇಂಡಿಯಾ" ಮತ್ತು ಕನ್ನಡ ದಿನ ಪತ್ರಿಕೆ "ಹೊಸ ದಿಗಂತ" ಗಳಲ್ಲಿ ದಿನಾಂಕ: 20.03.2022 ರಂದು ಹಾಗೂ ತುಮಕೂರು ಜಿಲ್ಲೆಯ ಸ್ಥಳೀಯ ದಿನ ಪತ್ರಿಕೆಯಾದ 'ಪ್ರಜಾ ಪ್ರಗತಿ' ಯಲ್ಲಿ ದಿನಾಂಕ: 23.03.2022 ರಂದು ಪ್ರಕಟಣೆ ನೀಡಲಾಯಿತು. ಪತ್ರಿಕಾ ಪ್ರಕಟಣೆಯಲ್ಲಿ, ಯೋಜನಾ ಸ್ಥಳದಲ್ಲಿ ವಾಸವಿರುವ ಆಸಕ್ತ ನಿವಾಸಿಗಳು, ಪರಿಸರ ಆಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗಬಹುದಾದ ಸಾರ್ವಜನಿಕರು ತಮ್ಮ ಸಲಹೆ, ಅನಿಸಿಕೆ, ಅಭಿಪ್ರಾಯ, ಟೀಕೆ– ಟಿಪ್ಪಣಿ ಹಾಗೂ ಅಹವಾಲುಗಳನ್ನು ಮೌಖಿಕವಾಗಿ/ಲಿಖಿತ/ಇ–ಮೇಲ್ ಮೂಲಕ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ಜಿಲ್ಲಾಧಿಕಾರಿಗಳು ಮತ್ತು ಅಧ್ಯಕ್ಷರು, ಪರಿಸರ ಸಾರ್ವಜನಿಕ ಸಭೆ ಸಮಿತಿ (ಜಿಲ್ಲಾಧಿಕಾರಿಗಳು, ತುಮಕೂರು ಜಿಲ್ಲೆ, ತುಮಕೂರು) ಇವರಿಗೆ, ಅಧಿಸೂಚನೆ ಪ್ರಕಟವಾದ 30 ದಿನಗಳೊಳಗೆ ಸಲ್ಲಿಸುವಂತೆ ತಿಳಿಸಲಾಗಿತ್ತು.

ಯೋಜನೆಯ ಪರಿಸರ ಅಘಾತ ಅಂದಾಜೀಕರಣ ವರದಿ ಹಾಗೂ ಕಾರ್ಯಕಾರಿ ಸಾರಾಂಶಗಳ ವರದಿಗಳನ್ನು ಸಾರ್ವಜನಿಕರ ಪರಾಮರ್ಶೆಗಾಗಿ ಜಿಲ್ಲಾಧಿಕಾರಿಗಳ ಕಛೇರಿ – ತುಮಕೂರು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಜಿಲ್ಲಾ ಪಂಚಾಯತ್ – ತುಮಕೂರು, ಜಿಲ್ಲಾ ಕೈಗಾರಿಕಾ ಕೇಂದ್ರ – ತುಮಕೂರು, ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ತಾಲ್ಲೂಕು ಪಂಚಾಯಿತಿ ಕಾರ್ಯಾಲಯ – ಕೊರಟಗೆರೆ, ಮುಖ್ಯಾಧಿಕಾರಿಗಳು, ಪಟ್ಟಣ ಪಂಚಾಯ್ತಿ ಕಾರ್ಯಾಲಯ – ಕೊರಟಗೆರೆ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ವಡ್ಡಗೆರೆ ಗ್ರಾಮ ಪಂಚಾಯಿತಿ ಕಾರ್ಯಾಲಯ – ವಡ್ಡಗೆರೆ, ಕೊರಟಗೆರೆ ತಾಲ್ಲೂಕು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪ್ರಾದೇಶಿಕ ಕಛೇರಿ – ತುಮಕೂರು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಕೇಂದ್ರ ಕಛೇರಿ – ಬೆಂಗಳೂರು ಹಾಗೂ ರಾಜ್ಯ ಮಟ್ಟದ ಪರಿಸರ ಆಘಾತ ಅಧ್ಯಯನ ಪ್ರಾಧಿಕಾರ, ಅರಣ್ಯ ಜೀವ ಪರಿಸ್ಥಿತಿ ಮತ್ತು ಪರಿಸರ ಇಲಾಖೆ, ಕರ್ನಾಟಕ ಸರ್ಕಾರ – ಬೆಂಗಳೂರು ಈ ಸ್ಥಳಗಳಲ್ಲಿ ಇಡಲಾಗಿತ್ತು.

**ನಡವಳಿ:**

ದಿನಾಂಕ: 20.04.2022 ರಂದು ಬೆಳಿಗ್ಗೆ 11.00 ಘಂಟೆಗೆ ತುಮಕೂರು ಜಿಲ್ಲೆಯ ಕೊರಟಗೆರೆ ತಾಲ್ಲೂಕಿನ, ಚೀಲಗಾನಹಳ್ಳಿ ಗ್ರಾಮದ ಸರ್ವೆ ನಂ. 21 ರಲ್ಲಿ 'ಪರಿಸರ ಸಾರ್ವಜನಿಕ ಸಭೆ' ನಡೆಸಲಾಯಿತು. ಶ್ರೀ ಕೆ.ಎಸ್. ಮಂಜುನಾಥ್, ಪರಿಸರ ಅಧಿಕಾರಿಗಳು, ಪ್ರಾದೇಶಿಕ ಕಛೇರಿ, ತುಮಕೂರು ಇವರು ಅಪರ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪರಿಸರ ಸಾರ್ವಜನಿಕ ಸಭೆ ಸಮಿತಿಯ ಅಧ್ಯಕ್ಷರಾದ ಶ್ರೀ ಕೆ. ಚನ್ನಬಸಪ್ಪ, ಕ.ಆ.ಸೇ ಹಾಗೂ ಶ್ರೀ ಬಿ.ಎಸ್. ಮುರಳೀಧರ, ಹಿರಿಯ ಪರಿಸರ ಅಧಿಕಾರಿಗಳು, ವಿಭಾಗೀಯ ಕಛೇರಿ, ಚಿತ್ರದುರ್ಗ ಇವರುಗಳನ್ನು ಸಭೆಗೆ ಸ್ವಾಗತಿಸಿದರು.

ಮುಂದುವರೆದು, ಭಾರತ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಮಾನ ಬದಲಾವಣೆ ಸಚಿವಾಲಯರವರ ಪರಿಸರ ಅಘಾತ ಅಧಿಸೂಚನೆ 2006 ರನ್ವಯ, ಸದರಿ ಪರಿಸರ ಸಾರ್ವಜನಿಕ ಸಭೆ ನಡೆಸಲು ತೆಗೆದುಕೊಂಡ ಕ್ರಮವನ್ನು ವಿವರಿಸಿದರು. ಉದ್ದೇಶಿತ 'ಕಟ್ಟಡ ಕಲ್ಲು /ಎಂ–ಸ್ಯಾಂಡ್ ಗಣಿಗಾರಿಕೆ' ಯೋಜನೆಗೆ ಪರಿಸರ ಅಘಾತ ಅಧಿಸೂಚನೆ 2006 ರ ವ್ಯಾಪ್ತಿಯಲ್ಲಿ ಸೇರಿರುವುದರಿಂದ ಪರಿಸರ ಸಾರ್ವಜನಿಕ ಸಭೆ ನಡೆಸಬೇಕಾಗಿರುವ ಕುರಿತು ನೆರೆದಿದ್ದ ಸಾರ್ವಜನಿಕರಿಗೆ ಸಭೆಯ ಉದ್ದೇಶವನ್ನು ವಿವರಿಸಿ, ಸಭೆಯ ಅಧ್ಯಕ್ಷರಾದ ಮಾನ್ಯ ಅಪರ ಜಿಲ್ಲಾಧಿಕಾರಿಗಳು ಸಾರ್ವಜನಿಕ ಸಭೆಯನ್ನು ನಡೆಸಿಕೊಡಬೇಕೆಂದು ಕೋರಿದರು. ಅದರಂತೆ, ಮಾನ್ಯ ಅಪರ ಜಿಲ್ಲಾಧಿಕಾರಿಗಳು ಸಭೆಯ ಮಹತ್ವವನ್ನು ತಿಳಿಸಿ ಶ್ರೀ ಪಾಲಾಕ್ಷ ಬಿನ್ ತಿಮ್ಮಯ್ಯ ಸಂಸ್ಥೆಯವರಿಗೆ ಯೋಜನೆಯ ಬಗ್ಗೆ ಪ್ರಸ್ತಾವನೆ ಮಂಡಿಸಲು ನಿರ್ದೇಶಿಸಿ, ಯೋಜನೆಯ ಬಗ್ಗೆ ಅಭಿಪ್ರಾಯಗಳು, ಆಕ್ಷೇಪಗಳು ಇದ್ದಲ್ಲಿ ಪ್ರತಿಪಾದಕರು ಮಾಡಿದ ಪ್ರಸ್ತುತಿಯ ನಂತರ ತಿಳಿಸಲು ಸಾರ್ವಜನಿಕರಿಗೆ ಸೂಚಿಸಿದರು.

ಉದ್ದೇಶಿತ ಯೋಜನೆಯ ಯೋಜನಾದಾರರ ಪರವಾಗಿ ಶ್ರೀ ಸಚಿನ್, ಮೆ.: ಹಾರಿಜಾನ್ ವೆಂಚೂರ್ಸ್, ಬೆಂಗಳೂರು ಇವರು ಯೋಜನೆಯ ತಾಂತ್ರಿಕ ಅಂಶಗಳನ್ನು ವಿವರವಾಗಿ ಪ್ರಸ್ತುತ ಪಡಿಸಿದರು. ಪರಿಸರ ಆಘಾತ ಅಧ್ಯಯನ ನಡೆಸುವಾಗ, ಕೇಂದ್ರ ಸರ್ಕಾರದ ಸೂಚನೆಯಂತೆ 10 ಕಿ.ಮೀ. ಪ್ರದೇಶದಲ್ಲಿ ಜಲ, ವಾಯು, ಮಣ್ಣು ಮತ್ತು ಶಬ್ಧ ಈ ರೀತಿಯಾಗಿ ವಿವಿಧ ಪರಿಸರ ಮಾನಕಗಳ ಗುಣಮಟ್ಟವನ್ನು ಪರಿಶೀಲಿಸಿದ ನಂತರವೇ ಸೂಕ್ತ ಯೋಜನಾ ವರದಿ ಮತ್ತು ಮಾಲಿನ್ಯ ನಿಯಂತ್ರಣ ಘಟಕಗಳ ವಿವರಗಳನ್ನು ಒಳಗೊಂಡ ಪರಿಸರ ನಿರ್ವಹಣಾ ಯೋಜನಾ ವರದಿಗಳನ್ನು (EMP) ತಯಾರಿಸಿ, State Level Environment Impact Assessment Authority (SEIAA) – Karnataka ಇವರಿಗೆ ಸಲ್ಲಿಸಲಾಗಿದೆ. ಸರ್ಕಾರದ ಅನುಮತಿಯ ನಂತರವೇ ಘಟಕವನ್ನು ಪ್ರಾರಂಭಿಸಲಾಗುವುದು ಎಂಬ ಮಾಹಿತಿಯನ್ನು ಸಾರ್ವಜನಿಕರಿಗೆ ತಿಳಿಸಿದರು

ಯೋಜನೆಯ ಕುರಿತಾಗಿ ಶ್ರೀ ಪಾಲಾಕ್ಷ ಬಿನ್ ತಿಮ್ಮಯ್ಯ ಇವರ ಪ್ರಸ್ಥಾವಿತ **'ಕಟ್ಟಡ ಕಲ್ಲು /ಎಂ-ಸ್ಯಾಂಡ್ ಗಣಿಗಾರಿಕೆ'** ಗೆ ಸಂಬಂದಪಟ್ಟಂತೆ ಅರೆ ಯಾಂತ್ರಿಕೃತ ವಿಧಾನ (ಓಪನ್ ಕ್ಯಾಸ್ಟ್ ಮೈನಿಂಗ್) ದಂತೆ ಗಣಿಗಾರಿಕೆ ಮಾಡಲಾಗುತ್ತದೆ. ಇದರಲ್ಲಿ ಡ್ರಿಲ್ಲಿಂಗ್, ಟ್ರ್ಯಾಕ್ಟರ್, ಕಂಪ್ರೆಸರ್, ವಾಟರ್ ಟ್ಯಾಂಕರ್ ಅನ್ನು ಬಳಸಲಾಗುತ್ತದೆ ಹಾಗೂ ಗಣಿಗಾರಿಕೆಯ ಕೆಲಸಗಳಲ್ಲಿ ಡ್ರಿಲ್ಲಿಂಗ್ ಮತ್ತು ನಿಯಂತ್ರಿತ ಬ್ಲಾಸ್ಟಿಂಗ್ ಇರುತ್ತದೆ ಎಂದು ತಿಳಿಸಿ ಇದರ ಸಾಮರ್ಥ್ಯ ವಾರ್ಷಿಕ ಸರಾಸರಿ 2,25,007 ಟನ್‌ಗಳು ಆಗಿರುತ್ತದೆ ಎಂದು ತಿಳಿಸಿದರು. ಯೋಜನೆಯ ಅನುಷ್ಠಾನದ ಸಂದರ್ಭದಲ್ಲಿ ಹಾಗೂ ಪೂರ್ಣಗೊಂಡ ನಂತರ ಯೋಜನೆಯಿಂದ ಪರಿಸರದ ಮೇಲಾಗುವ ಆಘಾತದ ಪ್ರಮಾಣ ಅತೀ ಅಲ್ಪ ಎಂದು ತಿಳಿಸಿದರು.

ಈ ಯೋಜನೆಯ ಬಗ್ಗೆ ಸಭೆಯಲ್ಲಿ ಪ್ರಸ್ತುತ ಪಡಿಸಿದ ವರದಿಯ ಪ್ರತಿಯನ್ನು ಅನುಬಂಧ-6 ರಂತೆ ಲಗತ್ತಿಸಿದೆ.

ಸಭೆಯಲ್ಲಿ ಭಾಗವಹಿಸಿದ್ದ ಕೆಲವು ಸಾರ್ವಜನಿಕರು ಈ ಕೆಳಕಂಡಂತೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು:

1. ಶ್ರೀ ಗುರುಮೂರ್ತಿ, ಭೈರವ ನಗರ ಇವರು ಉದ್ದೇಶಿತ ಜಾಗದಿಂದ 400 ಮೀಟರ್ ಅಂತರದಲ್ಲಿ ಶ್ರೀಯುತರ ಜಮೀನು ಇದ್ದು, ಸದರಿ ಜಮೀನಿನಲ್ಲಿಯೇ ಮನೆ ಕಟ್ಟಿಕೊಂಡು ವಾಸವಿರುವುದಾಗಿ ತಿಳಿಸಿ, ಸುತ್ತಮುತ್ತಲ ಗ್ರಾಮಗಳ ಸುಮಾರು 600 ರಿಂದ 700 ಕುರಿ, ದನ ಕರುಗಳು ಇದ್ದು, ಸುತ್ತ ಮುತ್ತ ಊರು, ಶಾಲೆ, ಮಠ ಮತ್ತು ಭಜನೆ ಮಂದಿರ ಇದ್ದು, ಇವುಗಳಿಗೆ ತೊಂದರೆ ಆಗುವುದಾಗಿ ಅಭಿಪ್ರಾಯ ವ್ಯಕ್ತಪಡಿಸಿದರು ಹಾಗೂ ಸದರಿ ಯೋಜನೆಗೆ ಅನುಮತಿ ನೀಡಬಾರದಾಗಿ ಮನವಿ ಮಾಡಿದರು.

2. ಶ್ರೀ ಬಿ. ಜಯರಾಮಯ್ಯ, ಭೈರವ ನಗರ ಇವರು ಭೈರವ ನಗರದಲ್ಲಿ ಪರಿಶಿಷ್ಟ ಜನಾಂಗವಿದ್ದು, ಉದ್ದೇಶಿತ ಜಾಗದಿಂದ ಅರ್ಧ ಕಿಲೋ ಮೀಟರ್ ದೂರದಲ್ಲಿದೆ, ಸುತ್ತ ಮುತ್ತಲ 16 ಗ್ರಾಮಗಳಲ್ಲಿರುವ ಕುರಿ, ಮೇಕೆ ಮೇಯಲು ಜಾಗ ಬೇಕಿದೆ, 1 ಕಿಲೋ ಮೀಟರ್ ಅಂತರದಲ್ಲಿ ಊರು ಶಾಲೆ ಎಲ್ಲವೂ ಇರುತ್ತದೆ ಎಂದು ತಿಳಿಸಿ, ಸದರಿ ಯೋಜನೆಗೆ ಅನುಮತಿ ನೀಡಬಾರದಾಗಿ ಮನವಿ ಮಾಡಿದರು.

3. ಶ್ರೀ ಡಿ. ರಾಮಯ್ಯ, ರೆಡ್ಡಿಹಳ್ಳಿ ಇವರು ಹತ್ತಿರದ ಹಳ್ಳಿಗಳಲ್ಲಿರುವ 1000 ಕುರಿಗಳು ಮೇಯಲು ಈ ಜಾಗದ ಅವಶ್ಯಕತೆಯಿದ್ದು, ಪ್ರಸ್ತಾವಿತ ಯೋಜನೆಗೆ ಅನುಮತಿ ನೀಡದೆ, ಯೋಜನೆಯನ್ನು ಕ್ಯಾನ್ಸಲ್ ಮಾಡಬೇಕೆಂದು ತಿಳಿಸಿದರು.

4. ಶ್ರೀ ವೈ.ಟಿ. ಶ್ರೀನಿವಾಸಯ್ಯ, ಗ್ರಾಮ ಪಂಚಾಯ್ತಿ ಸದಸ್ಯರು ಇವರು ಉದ್ದೇಶಿತ ಜಾಗದಿಂದ 300 ಮೀಟರ್ ಅಂತರದಲ್ಲಿ ಯಾದಗೆರೆ ಗ್ರಾಮ, ಇತಿಹಾಸ ಪ್ರಸಿದ್ಧ ಮುತ್ತುರಾಯಸ್ವಾಮಿ ದೇವಸ್ಥಾನ, ಪಕ್ಕದಲ್ಲಿ ದಂಡಿನಮಾರಮ್ಮ ದೇವಸ್ಥಾನ, ಪಂಚಾಯ್ತಿ ಬಿಲ್ಡಿಂಗ್ ಇತ್ಯಾದಿಗಳಿರುತ್ತವೆ. ಉದ್ದೇಶಿತ ಸದರಿ ಜಾಗಕ್ಕೆ 7 ಜನ ಅರ್ಜಿ ಸಲ್ಲಿಸಿದ್ದು, ತಿಮ್ಲಾಪುರ ವನ್ಯಜೀವಿ ಅರಣ್ಯ ಪ್ರದೇಶ ಹಾಗೂ ಕರಡಿಧಾಮ ಹತ್ತಿರವಿರುವುದರಿಂದ ಈಗಾಗಲೇ 5 ಜನರ ಅರ್ಜಿ ವಜಾ ಆಗಿರುತ್ತದೆ. ಸುತ್ತಮುತ್ತಲ 8 ರಿಂದ 10 ಹಳ್ಳಿಗಳ ಜಾನುವಾರುಗಳಿಗೆ ಮೇಯಲು ಯಾವುದೇ ಸರ್ಕಾರಿ

ಜಾಗ, ಗೋಮಾಳ ಇರುವುದಿಲ್ಲವಾದ್ದರಿಂದ ಸದರಿ ಜಾಗದ ಅವಶ್ಯಕತೆ ಇರುತ್ತದೆ. ಆದ್ದರಿಂದ ಸದರಿ ಜಾಗವನ್ನು ಮಂಜೂರು ಮಾಡದಿರಲು ತಿಳಿಸಿದರು.

5. ಶ್ರೀ ಆರ್.ಎಲ್. ಪಟ್ಟರಾಯಪ್ಪ, ರಂಗನಹಳ್ಳಿ ಇವರು ಉದ್ದೇಶಿತ ಜಾಗದ 80 ಮೀಟರ್ ಅಂತರದಲ್ಲಿ ನಿವೇಶನ ವಿಂಗಡಿಸಲು ಭೂ ಸ್ವಾಧೀನ ಪ್ರಕ್ರಿಯೆ ಹಂತದಲ್ಲಿರುತ್ತದೆ. ಉದ್ದೇಶಿತ ಯೋಜನೆಯಿಂದ ಸುತ್ತಮುತ್ತಲ 20 ರಿಂದ 25 ಹಳ್ಳಿಗಳಿಗೆ ತೊಂದರೆ ಆಗುವುದಾಗಿ ಹಾಗೂ ಉದ್ದೇಶಿತ ಕ್ವಾರಿಯ ಸಮೀಪ ಮುಂದೊಂದು ದಿನ ಸ್ಕೂಲ್ ಪ್ರಾರಂಭಿಸಲು ಸರ್ಕಾರ ಉದ್ದೇಶಿರುವುದರಿಂದ ಯೋಜನೆಗೆ ಅನುವತಿ ನೀಡಬಾರದಾಗಿ ತಿಳಿಸಿದರು.

6. ಶ್ರೀ ನರೇಂದ್ರ ಬಾಬು, ಗ್ರಾಮ ಪಂಚಾಯ್ತಿ ಸದಸ್ಯರು ಇವರು ಸದರಿ ಪ್ರದೇಶದಲ್ಲಿ ಈ ಹಿಂದೆ ಬೆಳೆ ಮಾಡುತ್ತಿದ್ದ ರೈತರನ್ನು ಅರಣ್ಯ ಇಲಾಖೆಯವರು ತೆರವುಗೊಳಿಸಿರುತ್ತಾರೆ. ಈಗಾಗಲೇ ಜಿಲ್ಲಾಧಿಕಾರಿಗಳ ಕಛೇರಿಗೆ, ಉಪವಿಭಾಗಾಧಿಕಾರಿಗಳ ಕಛೇರಿಗೆ ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಕಛೇರಿಗೆ ಅರ್ಜಿಗಳನ್ನು ಕೊಡಲಾಗಿರುತ್ತದೆ. ಸುತ್ತ ಮುತ್ತಲ 20 ಹಳ್ಳಿಗಳಿಗೆ ಅಗತ್ಯವಾದ ಪ್ರದೇಶವಾಗಿರುತ್ತದೆ. ವ್ಯವಸಾಯ ಮಾಡಲು, ಅರಣ್ಯೀಕರಣ ಮಾಡಲು ಉತ್ತಮವಾದ ಪ್ರದೇಶವಾಗಿರುತ್ತದೆ ಹಾಗಾಗಿ ಈ ಯೋಜನೆಗೆ ಅನುಮತಿ ನೀಡದಿರಲು ಕೋರಿದರು.

7. **ಶ್ರೀ ನರಸಪ್ಪ, ಮಾಜಿ** ಗ್ರಾಮ ಪಂಚಾಯ್ತಿ ಸದಸ್ಯರು, ಯಾದಗೆರೆ ಇವರು ಉದ್ದೇಶಿತ ಜಾಗದ ಸದರಿ ಸರ್ವೆ ನಂ.21 ಹೆಚ್ಚು ವಿಸ್ತೀರ್ಣದಲ್ಲಿದ್ದು, ಎಸ್.ಸಿ. ಗ್ರಾಮಗಳಾದ ಯಾದಗೆರೆ ಹಾಗೂ ಭೈರವ ನಗರಗಳ ಮಧ್ಯೆ ಇರುತ್ತದೆ, ಸುತ್ತ ಮುತ್ತಲಲ್ಲಿ ಮುತ್ತುರಾಯಸ್ವಾಮಿ, ದಂಡಿನಮಾರಮ್ಮ ದೇವಸ್ಥಾನ ಹಾಗೂ ಕೆರೆ ಇರುತ್ತದೆ. ಊರುಗಳಲ್ಲಿ ಮನೆ ಕಟ್ಟಿಕೊಳ್ಳಲು ನಿವೇಶನಗಳು ಇಲ್ಲದ ಕಾರಣ ಉದ್ದೇಶಿತ ಜಾಗದ ಸರ್ವೆ ನಂ.21 ರ ಅಕ್ಕಪಕ್ಕ ಮನೆಗಳನ್ನು ಕಟ್ಟಿಕೊಂಡು ಇಲ್ಲಿಯೇ ವಾಸ ಮಾಡುತ್ತಿರುತ್ತಾರೆ. ಆದ್ದರಿಂದ ಈ ಯೋಜನೆಗೆ ಅನುಮತಿ ನೀಡದೆ ರದ್ದುಪಡಿಸಲು ಕೋರಿದರು ಹಾಗೂ ಈ ಯೋಜನೆಗೆ ತಡೆ ನೀಡಲು ಕೋರಿ ಹೈಕೋರ್ಟ್‌ಗೆ ಅರ್ಜಿ ಹಾಕಿರುವುದಾಗಿ ತಿಳಿಸಿದರು.

ಸದರಿ ಸಭೆಯಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದ ಮೇಲಿನ 7 ಜನರೂ ಉದ್ದೇಶಿತ ಯೋಜನೆಗೆ ವಿರೋಧ ವ್ಯಕ್ತಪಡಿಸಿರುತ್ತಾರೆ. ಇದಲ್ಲದೇ ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರ ಪೈಕಿ ಕೆಲವರು ಸಭೆಯ ಅಧ್ಯಕ್ಷರಿಗೆ ಯೋಜನೆಯ ಪರವಾಗಿ ಮತ್ತು ವಿರುದ್ಧವಾಗಿ ಹಲವು ಮನವಿ ಪತ್ರಗಳನ್ನು ಸಲ್ಲಿಸಿರುತ್ತಾರೆ. ಇದರೊಂದಿಗೆ ಈ ಕಛೇರಿಯೂ ಸೇರಿದಂತೆ, ತುಮಕೂರು ಜಿಲ್ಲಾಧಿಕಾರಿಗಳ ಕಛೇರಿ ಮತ್ತು ಮಂಡಳಿಯ ಕೇಂದ್ರ ಕಛೇರಿಗಳಲ್ಲಿ ಈ ಯೋಜನೆ ಸಂಬಂಧ ಪರವಾಗಿ ಮತ್ತು ವಿರುದ್ಧವಾಗಿ ಮನವಿ ಪತ್ರಗಳು ಸ್ವೀಕೃತಗೊಂಡಿರುತ್ತವೆ. (ಯೋಜನೆಯ ವಿರುದ್ಧವಾಗಿ ಸ್ವೀಕೃತಗೊಂಡ ಅಹವಾಲುಗಳನ್ನು **ಅನುಭಂದ–4** ರಂತೆ ಹಾಗೂ ಯೋಜನೆಯ ಪರವಾಗಿ ಸ್ವೀಕೃತಗೊಂಡ ಅಹವಾಲುಗಳನ್ನು **ಅನುಭಂದ–5** ರಂತೆ ಲಗತ್ತಿಸಲಾಗಿದೆ).

ಪರಿಸರ ಸಾರ್ವಜನಿಕ ಸಭೆಯ ಅಧ್ಯಕ್ಷರಾದ ಶ್ರೀ ಕೆ. ಚನ್ನಬಸಪ್ಪ, ಕ.ಆ.ಸೇ, ಮಾನ್ಯ ಅಪರ ಜಿಲ್ಲಾಧಿಕಾರಿಗಳು, ತುಮಕೂರು ಜಿಲ್ಲೆ ಇವರು ಸಭೆಯ ನಡವಳಿಯೊಂದಿಗೆ ವಿಡಿಯೋ ಸಿಡಿ, ಛಾಯಾ ಚಿತ್ರಗಳನ್ನು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಂಗಳೂರು ರವರ ಮೂಲಕ ರಾಜ್ಯ ಪರಿಸರ, ಅರಣ್ಯ ಮತ್ತು ಜೀವಿಪರಿಸ್ಥಿತಿ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು ಇವರಿಗೆ ಮುಂದಿನ ಕ್ರಮಕ್ಕಾಗಿ ರವಾನಿಸುವುದಾಗಿ ತಿಳಿಸಿದರು. ಸಭೆಗೆ ಆಗಮಿಸಿದ್ದ ಎಲ್ಲರಿಗೂ ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

**(ಕೆ. ಚನ್ನಬಸಪ್ಪ, ಕ.ಆ.ಸೇ)**
**ಅಪರ ಜಿಲ್ಲಾಧಿಕಾರಿಗಳು ಮತ್ತು ಅಧ್ಯಕ್ಷರು,**
**ಜಿಲ್ಲಾ ಪರಿಸರ ಸಾರ್ವಜನಿಕ ಸಭೆ ಸಮಿತಿ, ತುಮಕೂರು.**